


بسم اللهِ الرّحمٰن الرّحيم

# ಹುನೈನ್ ಯುದ್ಧದ ನಂತರದ ದಂಡಯಾತ್ರೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12–09–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹುನೈನ್ ಯುದ್ಧದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು, ಅದರ ಹೆಚ್ಚಿನ ವಿವರಗಳು ಹೀಗಿವೆ: ಹುನೈನ್ ಯುದ್ಧದಲ್ಲೂ ಅಲ್ಲಾಹನ ಕಡೆಯಿಂದ ದೇವದೂತರ ಸೈನ್ಯವನ್ನು ಇಳಿಸಲಾಗಿದ್ದಾಗಿ ಪ್ರಸ್ತಾಪವಿದೆ. ಪವಿತ್ರ ಖುರ್‌ಆನ್ ವ್ಯಾಖ್ಯಾನಗಾರರು ಮತ್ತು ಚರಿತ್ರೆಗಾರರು ಈ ಯುದ್ಧದಲ್ಲಿ ದೇವದೂತರ ಅವತೀರ್ಣದ ಬಗ್ಗೆ ಅನೇಕ ಚರ್ಚೆಗಳನ್ನು ಮಾಡಿರುವರು. ಯುದ್ಧದಲ್ಲಿ ದೇವದೂತರು ವಾಸ್ತವವಾಗಿಯೂ ಭಾಗವಹಿಸಿದ್ದಾಗಿ ಸಹೀಹ್ ಆದ ವರದಿಗಳಿಂದ ದೃಢಪಟ್ಟಿದೆ. ಆದರೆ ಸಹಾಯಕ್ಕೆ ಒಬ್ಬನೇ ದೇವದೂತ ಸಾಕಾಗಿದ್ದರೂ, ಸಾವಿರಾರು ದೇವದೂತರು ಏಕೆ ಇಳಿದರು ಎಂಬ ಒಂದು ಸಂದೇಹ ಇಲ್ಲಿ ಉದ್ಭವಿಸುತ್ತದೆ. ಇಮಾಮ್ ಇಬ್ನ್ ಕಸೀರ್[ರ] ಬರೆಯುತ್ತಾರೆ: ಅಲ್ಲಾಹನ ಕಡೆಯಿಂದ ದೇವದೂತರ ಆಗಮನ ಮತ್ತು ಅದರ ಕುರಿತು ಮಾಹಿತಿ ಮುಸ್ಲಿಮರಿಗೆ ಸುವಾರ್ತೆಯ ರೂಪದಲ್ಲಾಗಿತ್ತು, ಇಲ್ಲದಿದ್ದರೆ ಅಲ್ಲಾಹನು ಇದರ ಹೊರತಾಗಿಯೂ ತನ್ನ ಶತ್ರುಗಳ ವಿರುದ್ಧ ಮುಸ್ಲಿಮರಿಗೆ ಸಹಾಯ ಮಾಡಬಹುದಿತ್ತು. ಹಝ್ರತ್ ಮಸೀಹ್ ಮೌಊದ್[ಅ] ಸಹ ಈ ವಿಷಯವನ್ನು ಹೀಗೆ ಹೇಳಿದ್ದಾರೆ: ಸತ್ಯವಿಶ್ವಾಸಿಗಳ ಹೃದಯಗಳಿಗೆ ಶಾಂತಿ ಲಭಿಸಲಿಕ್ಕಾಗಿ ಮತ್ತು ಯುದ್ಧದಲ್ಲಿ ಅವರಿಗೆ ಯಾವುದೇ ಭಯವಿರದೇ ಇರಲಿಕ್ಕಾಗಿ ಪವಿತ್ರ ಖುರ್‌ಆನಿನಲ್ಲಿ ದೇವದೂತರ ಸಹಾಯದ ಶುಭ ಸುದ್ದಿ ಇದೆ. ಆದ್ದರಿಂದ, ಐದು ಸಾವಿರ ದೇವದೂತರೊಂದಿಗೆ ಸಹಾಯಕ್ಕಾಗಿ ಬರುವುದಾಗಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿದನು. ಅವರಿಗೆ ಸುವಾರ್ತೆಯಾಗಲಿ ಎಂಬ ಉದ್ದೇಶದಿಂದ ಈ ಸಂಖ್ಯೆಯನ್ನು ಹೆಚ್ಚಿಸಿ ತೋರಿಸಲಾಗಿತ್ತು.

ಶತ್ರುಗಳ ಸೋಲು ಮತ್ತು ಪಲಾಯನದ ಬಗ್ಗೆ ಈ ಹಿಂದೆ ವಿವರಣೆ ನೀಡಲಾಗಿದೆ. ಬನೂ ಹವಾಝಿನ್ ವಾಸ್ತವವಾಗಿ ಅರಬ್ ರಾಜ್ಯದ ಅತ್ಯಂತ ಪ್ರಬಲ ಗೋತ್ರಗಳಲ್ಲಿ ಒಂದಾಗಿತ್ತು. 'ಇಲ್ಲಿಯ ತನಕ ಮುಹಮ್ಮದ್[ಸ] ಯುದ್ಧ ನಿಪುಣ ಗೋತ್ರಗಳನ್ನು ಎದುರಿಸಿಲ್ಲ, ನಮ್ಮನ್ನು ಎದುರಿಸುವಾಗ ಯುದ್ಧ ಎಂದರೇನು ಎಂದು ತಿಳಿಯುವುದು' ಎಂದು ಅವರು ಹೇಳಿಕೊಂಡಿದ್ದರು. ಆದರೆ ಅವರು ಕೆಲವೇ ಕ್ಷಣಗಳಲ್ಲಿ ಸೋತು ಓಡಿಹೋದರು ಮತ್ತು ತಮ್ಮ ಹೆಂಡತಿ ಮಕ್ಕಳು ಮತ್ತು ಜಾನುವಾರುಗಳ ಬಗ್ಗೆ ಯಾರಿಗೂ ಚಿಂತೆ ಇರಲಿಲ್ಲ. ಹವಾಝಿನ್ ಗೋತ್ರದವರು ಓಡಿಹೋದರೂ, ಸಕೀಫ್ ಗೋತ್ರದವರು ದೃಢವಾಗಿ ನಿಂತು ಧೈರ್ಯದಿಂದ ಹೋರಾಡಿದರು. ಅವರಲ್ಲಿ ಎಪ್ಪತ್ತು ಜನರು ಕೊಲ್ಲಲ್ಪಟ್ಟರು. ಅವರ ಕೊನೆಯ ಧ್ವಜವಾಹಕ ಉಸ್ಮಾನ್ ಬಿನ್ ಅಬ್ದುಲ್ಲಾಹ್ ಕೊಲ್ಲಲ್ಪಟ್ಟಾಗ, ಸಕೀಫ್‌ನವರೆಲ್ಲರೂ ಓಡಿಹೋದರು.

ಈ ಯುದ್ಧದಲ್ಲಿ ನಾಲ್ವರು ಸಹಾಬಿಯರು ಹುತಾತ್ಮರಾದರು. ಅವರ ಹೆಸರುಗಳು: ಹಝ್ರತ್ ಉಮ್ಮು ಐಮನ್[ರ]ರ ಪುತ್ರ ಐಮನ್ ಬಿನ್ ಉಬೈದ್[ರ], ಸುರಾಕ ಬಿನ್ ಹಾರಿಸ್[ರ], ಯಝೀದ್ ಬಿನ್ ಝಮ್‌ಅ[ರ] ಮತ್ತು ನಾಲ್ಕನೆಯವರು ಹಝ್ರತ್ ಅಬೂ ಆಮಿರ್[ರ]. ಒಬ್ಬ ವರದಿಗಾರ ಹೀಗೆ ಹೇಳುತ್ತಾರೆ: ಸತ್ಯನಿಷೇಧಿಗಳು ಸೋತ ನಂತರ ಮತ್ತು ಮುಸ್ಲಿಮರು ತಮ್ಮ ಶಿಬಿರಗಳ ಕಡೆಗೆ ಹೋಗುತ್ತಿದ್ದಾಗ, ಹಝ್ರತ್ ಪೈಗಂಬರ್[ಸ] ಜನರ ನಡುವೆ ನಡೆಯುತ್ತಿರುವುದನ್ನು ನಾನು ನೋಡಿದೆ. 'ಖಾಲಿದ್ ಬಿನ್ ವಲೀದ್‌ರ ಬಳಿಗೆ ನನ್ನನ್ನು ಯಾರು ಕರೆದುಕೊಂಡು ಹೋಗುವರು?' ಎಂದು ಹಝ್ರತ್ ಪೈಗಂಬರ್[ಸ] ಕೇಳುತ್ತಿದ್ದರು. ಹಝ್ರತ್ ಪೈಗಂಬರ್[ಸ] ಖಾಲಿದ್ ಬಳಿಗೆ ತಲುಪಿದಾಗ, ಖಾಲಿದ್ ಒಂದು ಪೀಠಕ್ಕೆ ಒರಗಿ ಕುಳಿತಿದ್ದರು. ಹಝ್ರತ್ ಪೈಗಂಬರ್[ಸ] ಖಾಲಿದ್‌ರ ಪಕ್ಕದಲ್ಲಿ ಕುಳಿತು ಅವರ ಗಾಯವನ್ನು ನೋಡಿ ತಮ್ಮ ಜೊಲ್ಲುರಸವನ್ನು ಹಚ್ಚಿದರು, ಅದರಿಂದ ಅವರು ಗುಣಮುಖರಾದರು. ಇದಲ್ಲದೆ ಹಝ್ರತ್ ಅಬ್ದುಲ್ಲಾ ಬಿನ್ ಅಬೀ ಔಫಾ, ಹಝ್ರತ್ ಅಬೂಬಕರ್ ಸಿದ್ದೀಕ್[ರ], ಹಝ್ರತ್ ಉಮರ್[ರ], ಹಝ್ರತ್ ಉಸ್ಮಾನ್[ರ] ಮತ್ತು ಹಝ್ರತ್ ಅಲಿ[ರ] ಕೂಡ ಗಾಯಗೊಂಡಿದ್ದರು.

ಆರಂಭದಲ್ಲಿ ಹುನೈನ್ ಯುದ್ಧಭೂಮಿಯಿಂದ ಕೆಲವು ಮುಸ್ಲಿಮರು ಓಡಿಹೋದಾಗ, ಅವರಲ್ಲಿ ಕೆಲವರು ಮಕ್ಕಾಕ್ಕೆ ಹೋಗಿ, ಮುಸ್ಲಿಮರು ಸೋತಿದ್ದಾರೆ ಮತ್ತು ಮುಹಮ್ಮದ್[ಸ] ಕೊಲ್ಲಲ್ಪಟ್ಟಿದ್ದಾರೆ ಎಂದು ಸುದ್ದಿ ಹಬ್ಬಿಸಿದರು – ನಊಧುಬಿಲ್ಲಾಹ್. ಈ ಸುದ್ದಿಯಿಂದ ಮಕ್ಕಾದಲ್ಲಿದ್ದ ಕಪಟವಿಶ್ವಾಸಿಗಳು ಮತ್ತು ಮನಸ್ಸಿನಲ್ಲಿ ಹಗೆ ಹೊಂದಿದ್ದವರು ಬಹಳ ಸಂತೋಷಪಟ್ಟರು. ಈಗ ಅರಬರು

ತಮ್ಮ ಹಳೆಯ ಧರ್ಮಕ್ಕೆ ಮರಳುವರು ಎಂದು ಅವರು ಹೇಳತೊಡಗಿದರು. ಆದರೆ ಸ್ವಲ್ಪ ಸಮಯದ ನಂತರ ಹುನೈನ್‌ನಿಂದ ಮುಸ್ಲಿಮರಿಗೆ ವಿಜಯ ಲಭಿಸಿದೆ ಮತ್ತು ಬನೂ ಹವಾಝಿನ್ ಗೋತ್ರದವರು ಹೀನಾಯವಾಗಿ ಸೋತು ಓಡಿಹೋಗಿದ್ದಾರೆ ಎಂಬ ಶುಭವಾರ್ತೆ ಬಂದಿತು.

ಮಕ್ಕಾ ವಿಜಯದ ಖುತ್ಬಕ್ಕೆ ಮುಂಚಿನ ಖುತ್ಬದಲ್ಲಿ, ಇಝಮ್ ಕಾರ್ಯಾಚರಣೆಯ ವಿವರಣೆಯಲ್ಲಿ, ಹಝ್ರತ್ ಮುಹಲ್ಲಿಂ ಬಿನ್ ಜಸ್ಸಾಮ ಎಂಬ ಸಹಾಬಿಯು ದಾರಿಯಲ್ಲಿ ಹೋಗುತ್ತಿದ್ದಾಗ ಒಬ್ಬ ವ್ಯಕ್ತಿ 'ಅಸ್ಸಲಾಮು ಅಲೈಕುಂ' ಎಂದು ಹೇಳಿದ್ದರೂ ಆತನನ್ನು ಕೊಂದರು ಎಂದು ಪ್ರಸ್ತಾಪಿಸಲಾಗಿತ್ತು. ಈ ಘಟನೆಯ ಬಗ್ಗೆ ಇನ್ನಷ್ಟು ವಿವರಗಳು ಲಭ್ಯವಿದೆ: ಹುನೈನ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ತಾಯಿಫ್ ಯುದ್ಧಕ್ಕಾಗಿ ಹೊರಡುವಾಗ, ಒಂದು ದಿನ ಝುಹ್ರ್ ನಮಾಝ್ ನಂತರ ಉಯೈನಾ ಬಿನ್ ಹಿಸ್ನ್ ಪೈಗಂಬರರೊಡನೆ ಕೊಲ್ಲಲ್ಪಟ್ಟ ಆಮಿರ್ ಬಿನ್ ಅಝ್‌ಬತ್ ಅಶ್‌ಜಯೀ ಎಂಬ ವ್ಯಕ್ತಿಯ ರಕ್ತಪಾತಕ್ಕೆ ಪರಿಹಾರವನ್ನು ಕೇಳಿದರು. ಆಗ ಮುಹಲ್ಲಿಂ ಬಿನ್ ಜಸ್ಸಾಮರನ್ನು ಬೆಂಬಲಿಸಲು ಬಯಸಿದ ಅಕ್ರಅ್ ಬಿನ್ ಹಾಬಿಸ್ ಹಝ್ರತ್ ಪೈಗಂಬರ್(ಸ)ರ ಮುಂದೆ ಉಯೈನಾರೊಡನೆ ವಾದಕ್ಕೆ ಇಳಿದರು. ಹಝ್ರತ್ ಪೈಗಂಬರ್(ಸ) ಉಯೈನಾನನ್ನು ಸಮಾಧಾನಪಡಿಸಿ ರಕ್ತಪರಿಹಾರ ಸ್ವೀಕರಿಸಲು ಸಿದ್ಧಗೊಳಿಸಿದರು. ಪರಿಹಾರದ ವಿಷಯ ನಿರ್ಧರಿಸಿದ ನಂತರ, ಮುಹಲ್ಲಿಂ ಎದ್ದು ಹಝ್ರತ್ ಪೈಗಂಬರ್(ಸ)ರ ಪಕ್ಕದಲ್ಲಿ ಕುಳಿತರು, ಅವರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ನಿಮಗೆ ತಲುಪಿದ ವಿಷಯದ ಬಗ್ಗೆ ನಾನು ಅಲ್ಲಾಹನ ಮುಂದೆ ಪಶ್ಚಾತ್ತಾಪ ಪಡುತ್ತೇನೆ. ನನಗಾಗಿ ಕ್ಷಮೆಯ ದುಆ ಮಾಡಿರಿ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ನಿನ್ನ ಹೆಸರೇನು? ಎಂದು ಕೇಳಿದರು. ಅವರು, ಮುಹಲ್ಲಿಂ ಬಿನ್ ಜಸ್ಸಾಮ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: ನೀನು ಅವನನ್ನು ಮುಸ್ಲಿಮನಾದ ಬಳಿಕವೂ ಕೊಂದೆಯಾ? ಮತ್ತು ಉಚ್ಚಸ್ವರದಲ್ಲಿ, ಹೇ ಅಲ್ಲಾಹ್, ಮುಹಲ್ಲಮ್‌ನ ಪಾಪಗಳನ್ನು ಕ್ಷಮಿಸಬೇಡ ಎಂದು ಹೇಳಿದರು. ಈ ವಾಕ್ಯವನ್ನು ಎಲ್ಲರೂ ಕೇಳಿದರು. ಅವರು ಪುನಃ, ಹೇ ಅಲ್ಲಾಹನ ಸಂದೇಶವಾಹಕರೇ, ನಾನು ಕ್ಷಮೆ ಕೇಳುತ್ತೇನೆ. ನನಗಾಗಿ ಕ್ಷಮೆ ಕೇಳಿರಿ ಎಂದರು. ಹಝ್ರತ್ ಪೈಗಂಬರ್(ಸ) ಮತ್ತೆ ಉಚ್ಚಸ್ವರದಲ್ಲಿ, 'ಹೇ ಅಲ್ಲಾಹ್, ಮುಹಲ್ಲಿಂ ಬಿನ್ ಜಸ್ಸಾಮನನ್ನು ಕ್ಷಮಿಸಬೇಡ' ಎಂದು ಹೇಳಿದರು. ಅವರು ಮೂರನೇ ಬಾರಿಯೂ ಅದನ್ನೇ ಹೇಳಿದಾಗ, ಹಝ್ರತ್ ಪೈಗಂಬರ್(ಸ) ಅವರು ಅದೇ ಮಾತನ್ನು ಪುನರಾವರ್ತಿಸಿದರು, ಅನಂತರ 'ನನ್ನ ಮುಂದಿನಿಂದ ಎದ್ದು ಹೋಗು' ಎಂದು ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು. ಇಬ್ನ್ ಇಸ್‌ಹಾಖ್‌ರ ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ನಂತರ ಅವರಿಗಾಗಿ ಕ್ಷಮೆಗಾಗಿ ದುಆ ಮಾಡಿದರು.

ಔತಾಸ್ ಕಾರ್ಯಾಚರಣೆಯ ಬಗ್ಗೆ ವಿವರಣೆ ಹೀಗಿದೆ: ಬನೂ ಹವಾಝಿನ್ ಗೋತ್ರದವರು ತಮ್ಮ ಹೆಂಡತಿ, ಮಕ್ಕಳು ಮತ್ತು ಎಲ್ಲ ಜಾನುವಾರುಗಳನ್ನು ಜೊತೆಗೆ ಕರೆದುಕೊಂಡು ದಾಳಿ ಮಾಡಿದ್ದರು. ಆದರೆ ಅವರು ಓಡಿಹೋದ ನಂತರ, ಈ ಎಲ್ಲವೂ ಮುಸ್ಲಿಮರಿಗೆ ಯುದ್ಧ ಸಂಪತ್ತಾಗಿ ಸಿಕ್ಕಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಆಮಿರ್ ಅಶ್‌ಅರೀ(ರ)ರ ನಾಯಕತ್ವದಲ್ಲಿ ಔತಾಸ್‌ನ ಕಡೆಗೆ ಒಂದು ಸೈನ್ಯವನ್ನು ಕಳುಹಿಸಿದರು. ಈ ಸೈನ್ಯದಲ್ಲಿ ಅಬೂ ಮೂಸಾ ಅಶ್‌ಅರೀ(ರ) ಮತ್ತು ಸಲ್ಮಾ ಬಿನ್ ಅಕೂಅ್(ರ) ಸಹ ಇದ್ದರು. ಹಝ್ರತ್ ಅಬೂ ಆಮಿರ್(ರ) ಶತ್ರುಗಳಿಗೆ ದ್ವಂದ್ವ ಯುದ್ಧಕ್ಕೆ ಆಹ್ವಾನ ನೀಡಿದರು. ಅಲ್ಲಿ ಹತ್ತು ಸಹೋದರರು ಇದ್ದರು, ಅವರು ತಮ್ಮ ಅಪ್ರತಿಮ ಯುದ್ಧ ಕೌಶಲ್ಯಗಳಿಂದ ಹೆಸರುವಾಸಿಯಾಗಿದ್ದರು. ಈ ಹತ್ತು ಸಹೋದರರು ಯುದ್ಧಕ್ಕಾಗಿ ಹೊರಟು ಬಂದರು. ಅಬೂ ಆಮಿರ್ ಪ್ರತಿಯೊಬ್ಬರಿಗೂ ಮೊದಲು ಇಸ್ಲಾಮಿಗೆ ಆಹ್ವಾನ ನೀಡಿದರು, ಆದರೆ ಅವರು ಯುದ್ಧಕ್ಕೆ ಆದ್ಯತೆ ನೀಡಿದರು ಮತ್ತು ಅವರು ಕೊಲ್ಲಲ್ಪಟ್ಟರು. ಹೀಗೆ ಒಂದರ ನಂತರ ಒಂದರಂತೆ ಒಂಬತ್ತು ಸಹೋದರರು ಕೊಲ್ಲಲ್ಪಟ್ಟರು. ಹತ್ತನೆಯ ಸಹೋದರ ಅನಂತರ ಇಸ್ಲಾಮ್ ಸ್ವೀಕರಿಸಿದನು ಮತ್ತು ಒಬ್ಬ ಒಳ್ಳೆಯ ಮುಸ್ಲಿಮನಾದನು ಎಂದು ಹೇಳಲಾಗುತ್ತದೆ. ಹೇಗಿದ್ದರೂ, ಹಝ್ರತ್ ಅಬೂ ಆಮಿರ್(ರ) ಧೈರ್ಯದಿಂದ ಹೋರಾಡುತ್ತಲೇ ಇದ್ದರು, ಈಮಧ್ಯೆ ಒಂದು ಬಾಣ ಅವರ ಎದೆಗೆ ಮತ್ತು ಇನ್ನೊಂದು ಮೊಣಕಾಲಿಗೆ ತಗುಲಿತು. ಗಾಯವು ಆಳವಾಗಿದ್ದರಿಂದ ಅವರು ಬದುಕುಳಿಯಲಿಲ್ಲ. ಅಬೂ ಮೂಸಾ ಅಶ್‌ಅರೀ(ರ) ಆ ಜನರೊಂದಿಗೆ ಯುದ್ಧ ಮಾಡಿದರು ಮತ್ತು ಶತ್ರುಗಳು ಅಲ್ಲಿಂದ ಸೋತು ಓಡಿಹೋದರು.

ಇನ್ನು ತುಫೈಲ್ ಬಿನ್ ಅಮ್ರ್ ದೂಸಿಯ ಕಾರ್ಯಾಚರಣೆಯ ಪ್ರಸ್ತಾಪವಿದೆ. ಇದು ಶವ್ವಾಲ್ ಎಂಟನೇ ಹಿಜರಿಯಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಹುನೈನ್‌ನಿಂದ ತಾಯಿಫ್‌ಗೆ ಹೊರಟಾಗ, ತುಫೈಲ್ ದೂಸಿಯರನ್ನು 'ಝುಲ್ ಕಫೈನ್' ಎಂಬ ವಿಗ್ರಹವನ್ನು ಕೆಡವಲು ಕಳುಹಿಸಿದರು. ಅವರಿಗೆ ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದರು: ಇಸ್ಲಾಮನ್ನು ಚೆನ್ನಾಗಿ ಹರಡಿರಿ, ಅಂದರೆ ಶಾಂತಿಯನ್ನು ಹರಡಿರಿ, ಜನರಿಗೆ ಆಹಾರವನ್ನು ನೀಡಿರಿ, ಒಬ್ಬ ಗೌರವಾನ್ವಿತ ವ್ಯಕ್ತಿ ತನ್ನ ಕುಟುಂಬದ ಮುಂದೆ ನಾಚುವಂತೆ ಅಲ್ಲಾಹನ ಮುಂದೆ ನಾಚಿಕೊಳ್ಳಿ. ಯಾವುದೇ ತಪ್ಪು ಅಥವಾ ಪಾಪ ಸಂಭವಿಸಿದರೆ, ತಕ್ಷಣವೇ ಒಂದು ಒಳ್ಳೆಯ ಕೆಲಸ ಮಾಡಿ, ಏಕೆಂದರೆ ಒಳ್ಳೆಯ ಕೆಲಸಗಳು ಪಾಪಗಳನ್ನು ಅಳಿಸಿಹಾಕುತ್ತವೆ. ನಂತರ ಹೇಳಿದರು: 'ನಿಮ್ಮ ಗೋತ್ರದ ಜನರನ್ನು ಜೊತೆಗೆ ಕರೆದುಕೊಂಡು ಈ ಕೆಲಸವನ್ನು ಪೂರ್ಣಗೊಳಿಸಿ ತಾಯಿಫ್‌ಗೆ ಮರಳಿ ಬನ್ನಿರಿ'. ಅದರಂತೆ, ಅವರು ತಮ್ಮ ಗೋತ್ರದ 400 ಜನರನ್ನು ಜೊತೆಗೆ ಕರೆದುಕೊಂಡು ಆ ಮರದ ವಿಗ್ರಹಕ್ಕೆ ಬೆಂಕಿ ಹಚ್ಚಿ ಅದನ್ನು ಸುಟ್ಟು ಹಾಕಿದರು.

ತಾಯಿಫ್ ಯುದ್ಧ ಕೂಡ ಶವ್ವಾಲ್ ಎಂಟನೇ ಹಿಜರಿಯಲ್ಲಿ ನಡೆಯಿತು. ತಾಯಿಫ್ ಬಹಳ ಬಲಿಷ್ಠ ಸ್ಥಳವಾಗಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ನಾಯಕತ್ವದಲ್ಲಿ ಒಂದು ಸಾವಿರ ಸೈನಿಕರ ಮುಂಚೂಣಿ ತಂಡವನ್ನು

ಕಳುಹಿಸಿದರು. ಅವರು ಅಲ್ಲಿಗೆ ತಲುಪಿ ತಾಯಿಫ್‌ನ ಜನರೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಿದರು, ಆದರೆ ಅವರು ಒಪ್ಪಲಿಲ್ಲ. ನಂತರ ಹಝ್ರತ್ ಪೈಗಂಬರ್(ಸ) ಸ್ವತಃ ತಾಯಿಫ್‌ನ ಕಡೆಗೆ ಸಾಗಿದರು. ಹಝ್ರತ್ ಪೈಗಂಬರ್(ಸ) ಆರಂಭದಲ್ಲಿ ತಾಯಿಫ್‌ಗೆ ಬಹಳ ಹತ್ತಿರದಲ್ಲಿ ಒಂದು ಬಯಲು ಪ್ರದೇಶದಲ್ಲಿ ತಂಗಿದರು. ಸೈನ್ಯವು ಸಂಪೂರ್ಣವಾಗಿ ಅಲ್ಲಿ ನೆಲೆಯೂರುವುದಕ್ಕೆ ಮುಂಚಿತವಾಗಿಯೇ ಕೋಟೆಯಿಂದ ಬಾಣದಳದವರು ತೀವ್ರವಾಗಿ ಬಾಣಗಳನ್ನು ಎಸೆಯಲು ಪ್ರಾರಂಭಿಸಿ ಅನೇಕ ಮುಸ್ಲಿಮರನ್ನು ಗಾಯಗೊಳಿಸಿದರು. ಮುತ್ತಿಗೆಯ ಸಮಯದಲ್ಲಿ ಎರಡೂ ಕಡೆಗಳಿಂದ ಬಾಣಗಳು ಮತ್ತು ಕಲ್ಲುಗಳ ದಾಳಿಯೂ ನಡೆಯಿತು. ಈ ಪರಿಸ್ಥಿತಿಯನ್ನು ನಿಭಾಯಿಸಲು ಹಝ್ರತ್ ಪೈಗಂಬರ್(ಸ) ಮಂಜನೀಕನ್ನು (ಕಲ್ಲು ಎಸೆಯುವ ಒಂದು ರೀತಿಯ ಉಪಕರಣ) ಬಳಸಿಕೊಂಡು ತಾಯಿಫ್‌ನ ಜನರ ಮೇಲೆ ದೊಡ್ಡ ದೊಡ್ಡ ಕಲ್ಲುಗಳನ್ನು ಎಸೆದರು. ಇದೇ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಒಮ್ಮೆ ತಾಯಿಫ್‌ನ ಜನರ ದ್ರಾಕ್ಷಿ ತೋಟಗಳನ್ನು ಕಡಿದು ಹಾಕಲು ಆದೇಶಿಸಿದರು. ನನ್ನ ಪ್ರಕಾರ, ಇದು ಅವರನ್ನು ಹೆದರಿಸಲು ಬಳಸಿದ ಕೊನೆಯ ಯುದ್ಧ ತಂತ್ರವಾಗಿತ್ತು, ಏಕೆಂದರೆ ಅದನ್ನು ನಂತರ ರದ್ದುಪಡಿಸಲಾಯಿತು. ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಅರ್ಧ ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ತಾಯಿಫ್‌ನ ಜನರೊಂದಿಗೆ ಯುದ್ಧದಲ್ಲಿ ನಿರತರಾಗಿದ್ದರು. ಆದರೆ ಹುನೈನ್‌ನಲ್ಲಿ ಅನುಭವಿಸಿದ ಸೋಲಿನ ಭಯ ಮತ್ತು ಭೀತಿಯು ವಿರೋಧಿಗಳ ಹೃದಯದ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ, ಅವರು ಕೋಟೆಯ ಒಳಗಿನಿಂದಲೇ ಹೋರಾಡಿದರು ಮತ್ತು ಹೊರಗೆ ಬರಲಿಲ್ಲ.

(ಖುತ್ಬದ ಕೊನೆಯಲ್ಲಿ, ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು, ಅವರ ಮಗ್ಫಿರತಿಗಾಗಿ ದುಆ ಮಾಡಿದರು ಮತ್ತು ಅವರ ಜನಾಝ ಗಾಯಿಬ್ ನಮಾಝನ್ನು ನಿರ್ವಹಿಸುವುದಾಗಿ ಹೇಳಿದರು.)

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
At, ***'Masjid Mubarak',*** *Islamabad, Tilford,* U.K. On 12-09-2025
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email****:* *khutuba.kannada@gmail.com*
**You can find all the Sermons archived at**: www.alislam.org/friday-sermon